# ಯುವಕರಲ್ಲಿ ಪರಿಸರ ಸಂರಕ್ಷಣೆ ಪ್ರಜ್ಞೆ ಅನಿವಾರ್ಯ : ಡಾ ಟಿ ವಿ ರಾಮಚಂದ್ರ

ಶಿರಸಿ ಬ್ಯೂರೋ ವರದಿ

ಶಿರಸಿ : ಪ್ರಸ್ತುತ ಕಾಲಘಟ್ಟದಲ್ಲಿ ಪರಿಸರ ಸಂರಕ್ಷಣೆಯ ಪ್ರಜ್ಞೆ ಯುವಕರಲ್ಲಿ ಮೂಡುವ ಅನಿವಾರ್ಯತೆ ತಲೆದೂರಿದ್ದು, ಯುವಜನತೆ ತಮ್ಮ ಮನಸ್ಸನ್ನು ಪರಿಸರ ಸಂರಕ್ಷಣೆಯ ಕಡೆಗೆ ಪರಿವರ್ತಿಸುವ ಕಾಲ ಸನ್ನಿಹಿತ ಎಂದು ಪರಿಸರ ವಿಜ್ಞಾನಿ ಡಾ ಟಿ ವಿ ರಾಮಚಂದ್ರ ಅಭಿಪ್ರಾಯಪಟ್ಟರು.

ಅವರು ಇಸಳೂರಿನ ಶ್ರೀನಿಕೇತನ ಶಾಲೆಯಲ್ಲಿ ಆಯೋಜಿಸಲಾಗಿದ್ದ ವೃಕ್ಷಲಕ್ಷ ಆಂದೋಲನದ ಕೆರೆ ಸಂರಕ್ಷಣೆ ಕಾರ್ಯಾಗಾರದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಹಾಳಾದ ಪರಿಸರವನ್ನು ಸಂರಕ್ಷಿಸಿ ಅದನ್ನು ಭವಿಷ್ಯತ್ತಿಗೆ ಕಾಯ್ದಿರಿಸುವ ಅಗತ್ಯತೆಯನ್ನು ನಿರ್ದಶನವನ್ನು ಕೊಟ್ಟು ವಿವರಿಸಿದರು. ಸಭೆಯಲ್ಲಿ ಶಿರಸಿಯ ಎಸಿಎಫ್ ಯಶ್‌ಪಾಲ್ ಮತ್ತು ವಿಜ್ಞಾನಿ ಡಾ ಸುಭಾಸ್ ಚಂದ್ರನ್ ಹಾಗೂ ಪರಿಸರ ಹೋರಾಟಗಾರ್ತಿ ವಾಸಂತಿ ಹೆಗಡೆ ಉಪಸ್ಥಿತರಿದ್ದರು. ಶ್ರೀನಿಕೇತನದ ಕಾರ್ಯದರ್ಶಿಗಳಾದ ಎನ್ ಎಂ ಹೆಗಡೆ ಅಧ್ಯಕ್ಷತೆ ವಹಿಸಿದ್ದರು.

ಶ್ರೀನಿಕೇತನದ ಆಡಳಿತಾಧಿಕಾರಿ ಲಕ್ಷ್ಮೀಶ ಹೆಗಡೆ ಸೋಂದಾರವರು ಸ್ವಾಗತಿಸಿದರು. ವೃಕ್ಷಲಕ್ಷ ಆಂದೋಲನದ ಸಂಚಾಲಕ ಅನಂತ ಹೆಗಡೆ ಅಶೀಸರ, ಕೆರೆ ಸಂರಕ್ಷಣಾ ಕಾರ್ಯಾಗಾರ ಕುರಿತು ಪ್ರಸ್ತಾವಿಕ ಮಾತನಾಡಿದರು. ಮುಖ್ಯಾಧ್ಯಾಪಕ ವಸಂತ ಭಟ್ ವಂದಿಸಿದರು. ನಂತರದಲ್ಲಿ ಶ್ರೀನಿಕೇತನ ಚಂದನ, ಲಯನ್ಸ್, ಇಸಳೂರು, ಬಿಸಲಕೊಪ್ಪ, ಬಿಳೂರು ಮತ್ತಿತರ ಶಾಲೆಯ 50 ಜನ ವಿಧ್ಯಾರ್ಥಿಗಳಿಗೆ ಮತ್ತು ವಿಜ್ಞಾನ ಶಿಕ್ಷಕರಿಗೆ ಕೆರೆಯ ಸಮೀಪದಲ್ಲೇ ಪ್ರಾತ್ಯಕ್ಷಿಕೆ ಮತ್ತು ತರಬೇತಿಯನ್ನು ವಿಜ್ಞಾನಿಗಳು ನೀಡಿದರು.